LEGISLATIVE ASSEMBLY

THIRD DAY.

Saturday, 17th March 1951.

The Assembly met in the Assembly Hall, Old Public Offices, Bangalore, at Eight of the Clock (morning).

Mr. Speaker (The Hon'ble Sri V. Venkatappa) in the Chair.

STARRED QUESTIONS

(to which oral answers were given)

Mr. SPEAKER (The Hon'ble Sri V. Venkatappa).—Questions. Question No. 60. Sri G. Narayana Gowda.

Steps taken to wipe out beggary in the State.

*Q.—60. **Sri G. NARAYANA GOWDA** (Kolar District—General).—

Will the Government be pleased to state :—

The steps they have taken to wipe out beggary in the State?

*A.—**The Hon'ble Sri K. T. BHASHYAM** (Minister for Law and Labour).—In order to wipe out beggary in the State, the Act for the Prohibition of Beggary of 1944 has been passed. In pursuance of the Act, a Beggar Colony has been opened in the Bangalore City.

The Beggar Relief Act has also been extended to the City of Mysore from January 1949 and a Beggar's Home is already established.

Further the question of opening some more centres is under the consideration of Government.

ಶ್ರೀ ಜಿ. ನಾರಾಯಣಗೌಡರು.—ನಮ್ಮ ಸಂಸ್ಥಾನದಲ್ಲಿ ಭಿಕ್ಷುಕರ ವಿಷಯದಲ್ಲಿ ಅಂಕಿ ಅಂಶಗಳನ್ನೇನಾದರೂ ಸಂಗ್ರಹಣೆ ಮಾಡಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ನಡೆದ ಸೆನ್ಸಸ್‌ನಲ್ಲಿ ಮಾಡಿರಬಹುದು, ಅಷ್ಟೇ ಹೊರತು ಪ್ರತ್ಯೇಕವಾಗಿ ಮಾಡಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಭಿಕ್ಷಾಟನಾವೃತ್ತಿಯನ್ನು ನಿರ್ಮೂಲಗೊಳಿಸುವುದಕ್ಕೆ ಸಂಬಂಧಪಟ್ಟ ಕಾನೂನು 1944ರಲ್ಲಿ ಜಾರಿಯಾದ ನಂತರ ಭಿಕ್ಷುಕರ ಅಂಕಿ ಅಂಶಗಳನ್ನು ಸಂಗ್ರಹ ಮಾಡಿದ ಮೇರೆ ತಾನೆ ಆ ಆಕ್ಟು ಜಾರಿಮಾಡುವುದಕ್ಕೆ ಕಾರಣವಾಯಿತು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ. ಭಿಕ್ಷುಕರ ಕಷ್ಟ ನಷ್ಟ ಬಹಳ ಜಾಸ್ತಿಯಾಗಿ ಕಂಡುಬಂದದ್ದರಿಂದ ಒಂದು ಕಾರ್ಯೋನ್ಮಿ ಸ್ಥಾಪನೆ ಮಾಡಿ ಆಕ್ಟು ಪ್ರಕಾರ ಭಿಕ್ಷಾಟನೆಯನ್ನು ನಿಷೇಧಪಡಿಸಿ ಸಹಾಯ ಮಾಡಬೇಕೆಂದು ಪುರುಮಾಡಿದರೇ ವಿನಾ ಅಂಕಿಅಂಶಗಳು ಸರಿಯಾಗಿ ಸಿಕ್ಕಲಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಆ ಕಾನೂನು ಪ್ರಕಾರ ಬೆಂಗಳೂರು ಪಟ್ಟಣದಲ್ಲಿ ಮೊದಲು ಪ್ರಾರಂಭ ಮಾಡಿದರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೌದು.

ಶ್ರೀ ಜಿ. ನಾರಾಯಣಗೌಡರು.—ಭಿಕ್ಷುಕರ ಕಾರ್ಯೋನ್ಮಿಯಲ್ಲಿ ಅವರ ಕೆಲಸ ಕಾರ್ಯಗಳು ಏನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅನೇಕರು ಯಾವ ಕೆಲಸವನ್ನೂ ಮಾಡುವುದಕ್ಕೆ ಶಕ್ತಿ ಇಲ್ಲದವರಾಗಿದ್ದಾರೆ. ಅಂಥಹವರಿಗೆ ಊಟ, ವಸತಿ ಮಾಡಿಕೊಟ್ಟಿದ್ದೇವೆ. ಕೆಲಸ ಮಾಡತಕ್ಕವರಿಗೆ ತೋಟದ ಕೆಲಸ ಮಾಡಿಸುತ್ತೇವೆ. ಮತ್ತೆ ಈಚೆಗೆ ಚಾಪೆ ನೇಯುವುದನ್ನು ಜಾರಿಯಲ್ಲಿ ತಂದಿದ್ದೇವೆ. ಇನ್ನೂ ಸಣ್ಣಪುಟ್ಟ ಕೈಗಾರಿಕೆಗಳಿಗೂ ಏರ್ಪಾಡು ಮಾಡುತ್ತಾ ಇದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ನಮ್ಮ ದೇಶದಲ್ಲಿ ಗ್ರಾಮಾಂತರ ಪ್ರದೇಶದೊಳಗೆ ಭಿಕ್ಷುಕವೃತ್ತಿಯಿಂದ ಹೆಚ್ಚು ಜನ ಜೀವನ ನಡೆಸುತ್ತಿದ್ದಾರೆಯಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ರೀತಿ ಇಲ್ಲ.

ಶ್ರೀ ಜಿ. ನಾರಾಯಣಗೌಡರು.—ಗ್ರಾಮಾಂತರ ಗಳಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಭಿಕ್ಷಾಟನಾ ವೃತ್ತಿಯನ್ನಿಟ್ಟುಕೊಂಡು ಒಂದು ತಾಂಡಕ್ಕೆ ಸೇರಿದ ಅನೇಕ ಜನರು ತಿರುಗುತ್ತಾ ಇರುವುದು ಗೊತ್ತೇ?

ಮಾನ್ಯ ಶ್ರೀ ಕೆ. ಟಿ ಭಾಷ್ಯಂರವರು.—Nomadic tribes ಎಂಬುದಾಗಿ ಇರುತ್ತಾರೆ. ಅವರು ಭಿಕ್ಷಾಟನೆ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಭಿಕ್ಷುಕರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವ ವದ್ಧತಿ ಇದ್ದೇ ಇದೆ.

ಶ್ರೀ ಜಿ. ನಾರಾಯಣಗೌಡರು.—ಹಾಗಾದರೆ ಅವರ ಬೇರೆ ವೃತ್ತಿ ಏನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಕೆಲವು ಕೋಮಿನವರು ಇರುತ್ತಾರೆ. ಅವರು ಸುತ್ತುತ್ತಲೇ ಇರುತ್ತಾರೆ. ಸಾಮಾನುಗಳನ್ನು ಮಾರಾಟ ಮಾಡುತ್ತಾರೆ. ಸೂಜಿ ಇತ್ಯಾದಿ ಪದಾರ್ಥಗಳನ್ನು ಮಾರಾಟ ಮಾಡುವುದು ತಮಗೆ ತಿಳಿದೇ ಇರಬಹುದು.

ಶ್ರೀ ಜಿ. ನಾರಾಯಣಗೌಡರು.—ಅಗ್ರಿಕಲ್ಚರಲ್ ಕಾಲೋನಿ ಎಂಬುದಾಗಿ ಸ್ಥಾಪನೆಮಾಡಿ, ಕೋ-ಆಪರೇಟಿವ ಫಾರ್ಮಿಂಗ್ ಮಾಡುವುದಕ್ಕೆ ಅವರನ್ನು ಒಂದು ಕಡೆ ನೆಲಸುವಂತೆ ಮಾಡಲು ಸಾಧ್ಯವಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ರೀತಿ ಮಾಡಲು ಪ್ರಯತ್ನಮಾಡುತ್ತಾ ಇದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಎಲ್ಲಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬೆಂಗಳೂರಿನಲ್ಲಿ ಮಾಡುತ್ತಾ ಇದ್ದೇವೆ. ಮೈಸೂರಿನಲ್ಲಿ ಮಾಡುತ್ತಾ ಇದ್ದೇವೆ. ಬಾಕಿ ಕಡೆಗಳಲ್ಲೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಮಾಡುವುದಕ್ಕಿಂತ ಹೆಚ್ಚು ಜಮೀನಿರತಕ್ಕ ತಾಲ್ಲೂಕುಗಳಲ್ಲಿ ಇಂಥಾ ಕಾಲೋನಿಗಳನ್ನು ಮಾಡಿದರೆ ಭಿಕ್ಷಾಟನಾ ವೃತ್ತಿ ನಿರ್ಮೂಲಗೊಂಡ ಹಾಗಾಗುತ್ತದೆ ಮತ್ತು ನಮ್ಮ ದೇಶಕ್ಕೂ ಒಂದು ಒಳ್ಳೆಯ ಉಪಕಾರ ಮಾಡಿದ ಹಾಗಾಗುತ್ತದೆ, ಅಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅನುಭವದಿಂದ ಅನೇಕ ತೊಂದರೆಗಳು ಕಂಡ ಬರುತ್ತವೆ. ಭಿಕ್ಷುಕರಿಗೆ ನೀವು ಏನೇ ಸೌಕರ್ಯ ಕೊಡಿ ಒಂದು ಕಡೆ ನೆಲಸುವುದಿಲ್ಲ, ಸುತ್ತುತ್ತಲೇ ಇರುತ್ತಾರೆ ಮತ್ತು ಹಾಗೇ ಜೀವನ ನಡೆಸಬೇಕೆಂದು ಪ್ರಯತ್ನ ಮಾಡುತ್ತಾರೆಯೇ ವಿನಾ ಕಷ್ಟಪಟ್ಟು ನಂಪಾದಿಸಬೇಕೆಂದು ಅವರ ಮನಸ್ಸಿನಲ್ಲಿರುವುದಿಲ್ಲ. ಆದ್ದರಿಂದ ಹಳ್ಳಿಗಾಡುಗಳಲ್ಲಿ ಷುರು ಮಾಡಿದರೆ ಹೆಚ್ಚು ಜನ ಸಿಕ್ಕುವುದಿಲ್ಲ. ಪಟ್ಟಣದಲ್ಲಿ ಅನೇಕರು ಬರುತ್ತಾರೆ. ಒಂದೇ ಸಮಯದಲ್ಲಿ 10-20 ಜನರನ್ನು ಅಲ್ಲಿ ಸೇರಿಸಿಕೊಳ್ಳಬಹುದು. ಗ್ರಾಮಾಂತರ ಗಳಲ್ಲಿ ಒಬ್ಬಿಬ್ಬರು ಸಿಕ್ಕುತ್ತಾರಾದ ಕಾರಣ ನರಿಯಾದಂಥಕೆಲಸ ನಡೆಯುವ ಹಾಗೆ ಕಾಣಲಿಲ್ಲ. ಆದರೂ ಆಲೋಚನೆ ಮಾಡಿನೋಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಹಳ್ಳಿಗಾಡುಗಳಲ್ಲಿ ಭಿಕ್ಷಾಟನಾವೃತ್ತಿಯನ್ನನುಸರಿಸುವುದು ಹೆಚ್ಚಾಗಿರುವುದರಿಂದ ವ್ಯವಸಾಯದ ಕೆಲಸಕ್ಕೆ ಕೂಲಿಗಳು ಸಿಕ್ಕದೆ ಬಹಳ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ನಾರಾಯಣಗೌಡರು.—ಅದನ್ನು ಪರಿಶೀಲಿಸುತ್ತೀರಾ ?

ಶ್ರೀ ಕೆ. ಟಿ. ಭಾಷ್ಯಂರವರು. - ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ ನಾರಾಯಣಗೌಡರು.— 'Further the question of opening some more centres is under the consideration of Government.' ಎಂದು ಹೇಳಿದ್ದೀರಿ. ಎಲ್ಲೆಲ್ಲಿ ಪ್ರಾರಂಭ ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಶಿವಮೊಗ್ಗ ಮತ್ತು ತುಮಕೂರು—ಈ ಎರಡು ಕಡೆಗಳಿಂದ ಈಗಾಗಲೇ ನಮಗೆ ಅರ್ಜಿಗಳು ಬಂದಿವೆ. ಅಲ್ಲಿ ಷುರುಮಾಡುತ್ತೇವೆ. ಇನ್ನೊಂದು ದಾವಣಗೆರೆಯಲ್ಲಿ ಮಾಡಬೇಕೆಂದು ಇದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಈ ಕೇಂದ್ರುಗಳನ್ನು ಪಟ್ಟಣಗಳಲ್ಲಿ ಸ್ಥಾಪನೆ ಮಾಡುವುದಕ್ಕಿಂತಲೂ ಹಳ್ಳಿಗಾಡುಗಳಲ್ಲಿ ಮಾಡಿದರೆ ಚೆನ್ನಾಗಿರುತ್ತದೆಯಲ್ಲವೆ!

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನು ಆಲೋಚನೆ ಮಾಡಬೇಕಾಗುತ್ತದೆ!

ಮುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಮುಸ್ಲಿಂ).—ಭಿಕ್ಷಾಟನೆಯನ್ನು ನಿರ್ಮೂಲ ಮಾಡುವ ಆಕ್ಟು ಜಾರಿಗೆ ಬಂದ ಮೇಲೆ ಬೆಂಗಳೂರು ಸಿಟಿಯಲ್ಲಿ ಇನ್‌ಸಿಡೆನ್ಸ್ ಆಫ್ ಬೆಗ್ಗರಿ ಎಷ್ಟು ಮಟ್ಟಿಗೆ ಕಡಿಮೆ ಆಗಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹೇಳುವುದಕ್ಕಾಗುವುದಿಲ್ಲ. ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ ಎಂತಲೇ ಭಾವನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಅದಕ್ಕೆ ಸಂಬಂಧಪಟ್ಟ ಚೇರ್ಮನ್‌ರವರಿಂದ ಬೆಂಗಳೂರು ಸಿಟಿಯಲ್ಲಿ ಭಿಕ್ಷಾಟನಾವೃತ್ತಿ ಎಷ್ಟು ಮಟ್ಟಿಗೆ ಕಡಿಮೆಯಾಗಿದೆ ಎಂಬ ಬಗ್ಗೆ ತಾವು ಒಂದು ವರದಿಯನ್ನು ತರಿಸಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಅಂಕಿ ಅಂಶಗಳನ್ನು ತರಿಸಿಕೊಂಡಿಲ್ಲ. ತರಿಸಿಕೊಳ್ಳುವುದಕ್ಕೆ ಆಗುವುದೂ ಇಲ್ಲ. ಎಷ್ಟೋ ಜನಗಳನ್ನು ಹಿಡಿದುಕೊಂಡು ಹೋಗುತ್ತಾರೆ ಪುನಃ ಹೊರಗಡೆಯಿಂದ ಎಷ್ಟೋ ಜನ ಬರುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಬೆಂಗಳೂರು ಸಿಟಿಯಲ್ಲಿ ಈ ಆಕ್ಟು ಜಾರಿಗೆ ಬಂದು ಎಷ್ಟು ವರ್ಷ ಆಯಿತು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—1944 45 ರಲ್ಲಿ ಷುರು ಆಯಿತು. ಅದರಂತೆ ಲೆಕ್ಕಾಚಾರ ಹಾಕಿದರೆ ಈಗ 5—6 ವರ್ಷ ಆಗಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಇಷ್ಟು ವರ್ಷದಲ್ಲಿ ಭಿಕ್ಷಾಟನೆ ನಿರ್ಮೂಲ ಮಾಡಬೇಕೆಂದು ಏನಾದರೂ ಒಂದು ಕಾರ್ಯಕ್ರಮ ಇದೆಯೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಮಾಡುವುದಕ್ಕಾಗುವುದಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಇನ್ನು ಮೂರು ವರ್ಷದಲ್ಲಿ ಭಿಕ್ಷಾಟನೆಯನ್ನು ನಿರ್ಮೂಲಗೊಳಿಸುವುದಕ್ಕೆ ಸಾಧ್ಯವಿಲ್ಲವೇ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಗುವ ಮಟ್ಟಿಗೆ ಕಾಣಲಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಬೆಂಗಳೂರು, ಮೈಸೂರು ಸಿಟಿಗಳಲ್ಲಿ ಭಿಕ್ಷುಕರ ಸಂಖ್ಯೆ ಹೆಚ್ಚಾಗಿರುವುದು ಗೊತ್ತೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇರಬಹುದು. ಸೌಕರ್ಯ ಇದೆ ಎಂದರೆ ನಾನ್ಯಾರು ಕಡೆಯಿಂದ ಹೆಚ್ಚು ಜನ ಬರುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಬೆಂಗಳೂರಿನಲ್ಲಿ ಭಿಕ್ಷುಕರಿಗೆ ಏನು ಸೌಕರ್ಯ ಕೊಟ್ಟಿದ್ದೀರಿ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ದಯವಿಟ್ಟು ಎದುರು ಪಕ್ಷದ ನಾಯಕರು ನಮ್ಮ ಭಿಕ್ಷುಕರ ಕಾಲೋನಿಗೆ ಬಂದು ನೋಡಿದರೆ ನಾವು ಎಷ್ಟು ಮಟ್ಟಿಗೆ ವ್ಯವಸ್ಥೆ ಮಾಡಿದ್ದೇವೆಂಬುದು ಗೊತ್ತಾಗುತ್ತದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಬೆಂಗಳೂರಿನಲ್ಲಿ ಭಿಕ್ಷುಕರ ಕಾಲೋನಿ ಸೌಕರ್ಯವೆಯೆಂದು ಹೇಳಿದಿರಿ. ಕಾಲೋನಿ ಮಾಡಿರುವುದಲ್ಲದೆ ಬೆಂಗಳೂರು ಸಿಟಿಯಲ್ಲಿ ಅವರಿಗೆ ಇನ್ನೇನು ಸೌಕರ್ಯ ಮಾಡಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಹಿಡಿಯುವ ಭಿಕ್ಷುಕರಿಗೆ ನಾವು ಕಲ್ಪಿಸಿರುವುದು ಒಂದು ರಿಲೀಫ್ ಕಾಲೋನಿ. ಬಾಕಿ ಭಿಕ್ಷುಕರು ಅವರವರ ಸೌಕರ್ಯವನ್ನು ಅವರೇ ಒದಗಿಸಿಕೊಳ್ಳುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈ ಕಾಲೋನಿ ಪ್ರಾರಂಭವಾದ ಮೇಲೆ ಎಷ್ಟು ಜನ ಭಿಕ್ಷುಕರನ್ನು ತಾವು ಒಟ್ಟುಗೂಡಿಸಿದ್ದೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಅಂಕಿ ಅಂಶಗಳನ್ನು ಹೇಳಲಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈಗ ಅಲ್ಲಿ ಎಷ್ಟು ಜನ ಭಿಕ್ಷುಕರಿದ್ದಾರೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಬೆಂಗಳೂರಿನಲ್ಲಿ 115 ಜನ ಇದ್ದಾರೆ. ಮೈಸೂರಿನಲ್ಲಿ 15ಜನ ಇದ್ದಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ತಾವು ಈ ಕಾಲೋನಿಯಲ್ಲಿ ಪ್ರತಿಯೊಬ್ಬರನ್ನೂ ಎಷ್ಟು ದಿವಸ ಇಟ್ಟುಕೊಳ್ಳುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಒಬ್ಬೊಬ್ಬರು ಎರಡು ಮೂರು ವರ್ಷಗಳ ವರೆಗೂ ಇರುತ್ತಾರೆ. ಇನ್ನು ಕೆಲವರು ಒಂದು ತಿಂಗಳು, ಎರಡು ತಿಂಗಳು ಅಥವಾ ಮೂರು ತಿಂಗಳು ಇರುತ್ತಾರೆ, ಆ ಮೇಲೆ ಹೊರಟು ಹೋಗುತ್ತಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಪುನಃ ಅವರು ಭಿಕ್ಷಾಟನೆ ಮಾಡುವುದಕ್ಕೆ ಅವಕಾಶವಿಲ್ಲದ ಹಾಗೆ ತಾವು ಏನು ಏರ್ಪಾಡು ಮಾಡುತ್ತೀರಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತಕ್ಕ ಬೋಧನೆ ಮಾಡುತ್ತೇವೆ, ಯಾವುದಾದರೊಂದು ಕೆಲಸಗಾರಿಕೆಯಲ್ಲಿ ತೊಡಗುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. ಅವರಿಗೆ ನೆಂಟರಿಷ್ಟರು ಯಾರಾದರೂ ಇದ್ದರೆ ಅವರಿಗೂ ಈ ಬಗ್ಗೆ ತಕ್ಕ ತಿಳಿವಳಿಕೆ ಕೊಡುತ್ತೇವೆ.

ಜವಾಬ್ ಜೆ. ಮಹಮದ್ ಇಮಾಂರವರು.—ಈ ನೀವು ತೆಗೆದುಕೊಂಡಿರುವ ಕಾರ್ಯಕ್ರಮಗಳಿಂದ ಭಿಕ್ಷಾಟನೆ ನಿರ್ಮೂಲವಾಗುತ್ತದೆಯೇ ? ಹಾಗಿದ್ದರೆ, ಎಷ್ಟು ವರ್ಷದಲ್ಲಿ ಆಗುತ್ತೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಿರ್ಮೂಲ ಮಾಡಬೇಕೆಂಬ ಉದ್ದೇಶದಿಂದಲೇ ಈ ವಿಷಯವನ್ನು ಕೈಗೆ ತೆಗೆದುಕೊಂಡಿರುವುದು. ಆದರೆ ಎಷ್ಟು ವರ್ಷದಲ್ಲಿ ಆಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ.

Janab MAHMOOD SHARIFF (Mysore *cum* Mandya *cum* Hassan—Muslim).—You have stated that there are a certain number of beggars in the colony. Is it possible to tell what the establishment charges are ?

The Hon'ble Sri K. T. BHASHYAM.—The establishment charges are Rs. 31,700 in Bangalore and about Rs. 1,600 in Mysore.

Janab MAHMOOD SHARIFF.—Is it possible to tell what the feeding charges are ?

The Hon'ble Sri K. T. BHASHYAM.—The feeding charges come to Rs. 36,000 in Bangalore and Rs. 3,000 and odd in Mysore.

Janab MAHMOOD SHARIFF.—Is it not a fact that in the Press articles have appeared which go to show that the arrangements made there are not proper and satisfactory ?

The Hon'ble Sri K. T. BHASHYAM.—Not that the arrangements made there are not satisfactory, but more and more beggars are coming and why should they not be rounded up ? That is the kind of article that I have come across. If you pay a visit to the colony in Bangalore, you will see that it is better to be a beggar in Bangalore than a millionaire in Madras. (Laughter).

Janab MAHMOOD SHARIFF.—Is it not possible to prevent these persons coming into the State ?

The Hon'ble Sri K. T. BHASHYAM.—How can we do that ? It is for the Hon'ble Member to suggest.

Srimathi M. RATNAMMA ISAAC (Kolar District—General).—Is there separate accommodation for women and children ?

The Hon'ble Sri K T. BHASHYAM.—Yes ; children are not taken in. As soon as we round up any child, some relation or other comes up and we hand over the child with the caution that they should not allow the child to beg. But there are several helpless women and young boys and we have got separate accommodation for each category.

Sri H. M. CHANNABASAPPA (Mysore District—General).—Have the Government declared that beggary on the part of able-bodied persons is an offence ?

The Hon'ble Sri K. T. BHASHYAM.—We have got an Act which says that in certain areas beggars will not be allowed to beg in the streets.

Sri H. M. CHANNABASAPPA.—Are the Government aware that there are still able-bodied beggars ?

The Hon'ble Sri K. T. BHASHYAM.—There are.

Sri H. M. CHANNABASAPPA.—Shall I take that it is the weakness of the Government to have allowed such beggars ?

The Hon'ble Sri K. T. BHASHYAM.—It is not so. We are trying to round them up. Supposing somebody comes in the night at 8 o'clock and begs, what can we do ?

Sri H. M. CHANNABASAPPA.—Are the Government pleading weakness?

The Hon'ble Sri K. T. BHASHYAM.—No, no. I have already said that we are doing as much as we can, but the supply is greater than the demand. (Laughter).

Sri H. M. CHANNABASAPPA—I would like to know if it is the opinion of the Government that by creating these comforts for able-bodied beggars, they will be able to prevent beggary?

The Hon'ble Sri K. T. BHASHYAM.—They are not all able-bodied beggars. Some of them are. We round them up and give them work. There are many disabled people.

Sri H. M. CHANNABASAPPA.—Are the Government contemplating to punish the able-bodied people for this offence?

The Hon'ble Sri K. T. BHASHYAM.—What is the use of punishment? If they are put to jail, we have to give them food, shelter, medical aid, etc.

Sri H. M. CHANNABASAPPA.—Are the Government contemplating making use of these people for productive schemes?

The Hon'ble Sri K. T. BHASHYAM.—As I said, we are putting them for gardening work, for mat-weaving several cottage industries and the like.

Sri H. M. CHANNABASAPPA.—Are the Government aware that there is vast scope for such people in the rural areas?

The Hon'ble Sri K. T. BHASHYAM—I do not think there is vast scope; there is some scope.

Sri H. M. CHANNABASAPPA.—What do the Government contemplate in this behalf?

The Hon'ble Sri K. T. BHASHYAM.—We are extending the Beggar Relief Act to several places. We are trying to open several centres at other places also.

Sri H. M. CHANNABASAPPA.—Have the Government assessed the progress so far made?

The Hon'ble Sri K. T. BHASHYAM.—We have been assessing and we have found that we have been doing good work and we intend to proceed on the line for some time more.

Sri H. M. CHANNABASAPPA.—What do the Government propose to do with political beggars?

The Hon'ble Sri K. T. BHASHYAM.—That is a hypothetical question.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಈಗ ಸಂಸ್ಥಾನದಲ್ಲಿ ಎಷ್ಟು ಜನ ಭಿಕ್ಷುಕರಿದ್ದಾರೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆ ಅಂಕಿ ಅಂಶಗಳು ಇನ್ನೂ ಗೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಭಿಕ್ಷುಕರಲ್ಲಿ ಕಣ್ಣು, ಮೂಗು, ಕೈಕಾಲು ಮುಂತಾಗಿ ಅಂಗಾಂಗಗಳು ಚೆನ್ನಾಗಿರುವವರೂ ಇದ್ದಾರೆಂಬುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಥವರೂ ಕೆಲವರಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಭಿಕ್ಷಾವೃತ್ತಿಯಲ್ಲಿರುವವರಲ್ಲಿ ಸೋಮಾರಿಗಳೇ ಜಾಸ್ತಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸೋಮಾರಿಗಳೂ ಇರುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಸೋಮಾರಿಗಳನ್ನು ಹಿಡಿದುಕೊಂಡುಹೋಗಿ ವ್ಯವಸಾಯ ಮಾಡುವುದಕ್ಕೆ ಹಾಕಿಕೊಂಡು ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೇನಾದರೂ ಪ್ರಯತ್ನ ಮಾಡಿದ್ದೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದನ್ನೂ ಮಾಡುತ್ತಲೇ ಇದ್ದೇವೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈಗೇನು ಮಾಡಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಯಾರಾದರೂ ಭಿಕ್ಷುಕರಿದ್ದರೆ ಅವರನ್ನು ಹಿಡಿದುಕೊಂಡು ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಮಾಡಿ ಅವರನ್ನು ಭಿಕ್ಷುಕರ ಗೃಹಕ್ಕೆ ಕಳುಹಿಸುತ್ತೇವೆ. ಅಲ್ಲಿ ಅವರಿಂದ ಕೆಲಸ ಮಾಡಿಸುತ್ತೇವೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಭಿಕ್ಷುಕರ ಗೃಹದಲ್ಲಿ ಮೈ ಕೈ ಗಟ್ಟಿಮುಟ್ಟಾಗಿರುವ ಭಿಕ್ಷುಕರು ಎಷ್ಟು ಮಂದಿ ಇದ್ದಾರೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಷ್ಟು ಎಂದು ಹೇಳುವುದಕ್ಕಾಗುವುದಿಲ್ಲ; ಅಂತೂ ಕೆಲವರಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರಿಗೇನು ಕೆಲಸ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತೋಟದ ಕೆಲಸ, ಚಾಪೆ ಮುಂತಾದ ಹೆಣಿಗೆ ಕೆಲಸ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈಗ 6 ವರ್ಷದಿಂದ ಈ ಆಕ್ಟು ಜಾರಿಯಲ್ಲಿದ್ದರೂ ಇದರ ವ್ಯವಸ್ಥೆ ಇನ್ನೂ ಸರಿಯಾಗಿ ನಡೆಯದಿರುವುದನ್ನು ನೋಡಿದರೆ, ಏನಾದರೂ ಆಕ್ಟಿನಲ್ಲೇ ಲೋಪವಿದೆಯೆಂದು ಭಾವಿಸೋಣವೇ? ಅಥವಾ ಅದನ್ನು ಯಶಸ್ವಿಯಾಗಿ ಜಾರಿಗೆ ತರುವುದರಲ್ಲಿ ತೊಂದರೆಯಿದೆಯೆಂದು ಭಾವಿಸೋಣವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಆಕ್ಟಿನಲ್ಲೇ ನೂ ತೊಂದರೆಯಿಲ್ಲ. ಹಣದ ಅಭಾವ, ಅಷ್ಟೆ. ಪೂರ್ತಿ ಯಾಗಿ ಜಾರಿಗೆ ತರಬೇಕಾದರೆ ಹೆಚ್ಚಿಗೆ ಖರ್ಚಾಗುತ್ತದೆ. ಖರ್ಚಾದರೂ ಪರವಾಗಿಲ್ಲವೆಂದು ನಾವೀಗ ಖರ್ಚು ಮಾಡುತ್ತಿದ್ದೇವೆ. ಈಗಿನ ಆರ್ಥಿಕ ದುಸ್ಥಿತಿಯಲ್ಲಿ ಅತ್ಯಾವಶ್ಯಕವಾದ ಬಾಬುಗಳಿಗೇ ತೊಂದರೆಯಾಗಿರುವುದರಿಂದ ಸ್ವಲ್ಪ ನಿಧಾನವಾಗಿ ಹೋಗುತ್ತಿದ್ದೇವೆ, ಅಷ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಈ ಭಿಕ್ಷುಕರು ಈ ರೀತಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಾ, public nuisance ಆಗಿರುವುದಕ್ಕೆ ಬಿಡುವ ಬದಲು ಅವರನ್ನು ಜೈಲಿಗೇ ಕಳುಹಿಸಿ ಅದಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡುವುದು ಉತ್ತಮವಲ್ಲವೇ!

The Hon'ble Sri K. T. BHASHYAM.—It is a matter of policy. We are now proceeding on the basis of humanitarian treatment of beggars as opposed to criminals. To class them all together might not be wise nor desirable.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಆಕ್ಟನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕೆಂಬುದು ಸರ್ಕಾರದವರ ಅಭಿಪ್ರಾಯವಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದೇ ಅಭಿಪ್ರಾಯದಿಂದಲೇ ಈ ಕೆಲಸವನ್ನು ಕೈಕೊಂಡಿರುವುದು. ಆ ಅಭಿಪ್ರಾಯದಂತೆಯೇ ನಡೆಯುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ತಾವು ಹೇಳಿದಂತೆ ಎಷ್ಟು ಜನರಿದ್ದರೆ ಎಷ್ಟು ಜನರಿಗೆ ಮಾತ್ರ ತಾವು ಏರ್ಪಾಡುಮಾಡಿದಹಾಗಾಯಿತೇ ಏನಾ ಈ ಆಕ್ಟಿನಿಂದ ಇಡೀ ಜನತೆಗೆ ಹೆಚ್ಚಿಗೆ ಪ್ರಯೋಜನವಾದಹಾಗಾಗಲಲ್ಲವೆಂದು ನಾವು ಭಾವಿಸೋಣವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಿಮ್ಮ ಪ್ರಶ್ನೆ ಅರ್ಥವಾಗಲಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇಂಥಾ ಬೆಂಗಳೂರು ಪಟ್ಟಣದಲ್ಲೇ ಪೂರ್ತಿ ಜಾರಿಗೆ ತರದ ಮೇಲೆ ಏಕೆ ಇಷ್ಟೆಲ್ಲಾ ಹೆಚ್ಚು ಸಿಬ್ಬಂದಿ, ಖರ್ಚು ಇಟ್ಟುಕೊಂಡಿರುವುದು? ಅದರಿಂದ ಜನರಿಗೇನಾದರೂ ಪ್ರಯೋಜನವಾಗಿದೆಯೇ?

ಮಾನ್ಯ ಶ್ರೀ ಕೆ.ಟಿ. ಭಾಷ್ಯಂರವರು.—ನೀವು ಹೇಳುವುದು ಅರ್ಥವಾಗುತ್ತಿಲ್ಲ. ಈಗ ಭಿಕ್ಷುಕರನ್ನು ಒಟ್ಟುಗೂಡಿಸಿ ಕಾಲೋನಿಯಲ್ಲಿ ಇಟ್ಟುಕೊಂಡು, ಅವರಿಗೆ ಕೈಲಾದಮಟ್ಟಿಗೂ ಅನ್ನಬಟ್ಟೆ ಕೊಟ್ಟು, ಕೆಲಸ ಮಾಡುವುದಕ್ಕಾಗುವವರಿಂದ ಕೆಲಸ ಮಾಡಿಸಿಕೊಳ್ಳಬೇಕೆಂದು ಮಾಡಿದ್ದೇವೆ. ಅದೇ ರೀತಿ ನಡೆಯುತ್ತಿದೆ. ಹಾಲಿ ಇರುವುದು 115 ಜನ ಎಂದು ಹೇಳಿದೆ. ಇದಕ್ಕೆ ಮುಂಚೆ ಎಷ್ಟೋ ಜನರನ್ನು ಹಿಡಿದಿದ್ದೆವು. ಅವರ ಪೈಕಿ ಕೆಲವರನ್ನು ಬೇರೆ ಬೇರೆ ಊರಿಗೆ—ಮದ್ರಾಸ್ ಕಡೆಗೆ ಹೋಗುತ್ತೇವೆಂದು ಹೇಳಿದುದರ ಮೇರೆ ಕಳುಹಿಸಿಕೊಟ್ಟಿದ್ದೇವೆ, ಇನ್ನು ಕೆಲವರನ್ನು ಅವರ ನೆಂಟರಿಷ್ಟರು ಬಂದು ಕೇಳಿಕೊಂಡುದರಮೇರೆ ಅವರಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ, ಇನ್ನು ಕೆಲವರು ತಾವಿನ್ನುಮೇರೆ ಭಿಕ್ಷಾಟನೆ ಮಾಡುವುದಿಲ್ಲವೆಂದು ಬರೆದುಕೊಟ್ಟಿದ್ದರ ಮೇರೆ ಅವರವರ ಮನೆಗೆ ಹೋಗಲು ಅವಕಾಶ ಮಾಡಿ ಕೊಟ್ಟಿದ್ದೇವೆ. ಹೀಗೆಲ್ಲಾ ಆಗಿ ಈಗ ಅಲ್ಲಿ ಉಳಿದಿರುವವರು ಇಪ್ಪತ್ತು ಮಂದಿ.

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ ಈ ಪ್ರಶ್ನೆ ಬಂದಾಗ ಇದನ್ನು ಜಾರಿ ಮಾಡಲು ಸಾಕಾದಷ್ಟು ಪೋಲೀಸ್ ಸಿಬ್ಬಂದಿ ಇಲ್ಲವೆಂದು ಸಚಿವರು ಹೇಳಿದ್ದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅದೂ ವಾಸ್ತವವಿರಬಹುದು, ಭಿಕ್ಷುಕರನ್ನು ಪೋಲೀಸಿನವರು ಹಿಡಿದು ಒಟ್ಟುಗೂಡಿಸಬೇಕೆಂದು ಹೇಳಿದ್ದೇವೆ. ಕೆಲವು ವೇಳೆ ಪೋಲೀಸ್ ಸಿಬ್ಬಂದಿ ಸಾಲದೆ ಭಿಕ್ಷುಕರು ತಪ್ಪಿಸಿಕೊಳ್ಳುತ್ತಾರೆ. ಆದರೂ ನಮ್ಮ ಸಿಬ್ಬಂದಿಯವರು ಹಿಡಿದುಕೊಂಡು ಬರುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಮುಂದಾದರೂ ಇದನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೂ ಮತ್ತು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೂ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೈಲಾದ ಮಟ್ಟಿಗೂ ಮಾಡುತ್ತಿದ್ದೇವೆ. ಹಾಗೂ ಕೆಲವರು ತಪ್ಪಿಸಿಕೊಂಡು ಹೋಗುತ್ತಾರೆ. ಬೆಂಗಳೂರಿನಲ್ಲಿ ಎಷ್ಟೋ ಸಂದಿಗಳಿವೆ. ಅಲ್ಲೆಲ್ಲೋ ಭಿಕ್ಷೆಗೆ ಹೋಗುತ್ತಿದ್ದರೆ ಏನು ಮಾಡುವುದು?

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಸಂದಿಗಳಲ್ಲಿ ಏನಾದರೂ ತಕ್ಸೀರು ನಡೆಸಿದರೆ ಅಂಥವರನ್ನು ಬಿಟ್ಟು ಬಿಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಲ್ಲ, ಶಿಕ್ಷೆ ಮಾಡುತ್ತೇವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಭಿಕ್ಷಾಟನೆಯನ್ನೇ ತಡೆಗಟ್ಟುವ ಮಾರ್ಗಗಳೇನಾದರೂ ಇವೆಯೇ?

ಮಾನ್ಯ ಶ್ರೀ ಕೆ.ಟಿ. ಭಾಷ್ಯಂರವರು.—ಇವೆ, ಹೆಚ್ಚು ಬೆಳೆ ಬೆಳೆಯುವ ಯೋಜನೆ, ಕೈಗಾರಿಕಾಭಿವೃದ್ಧಿ ಕಾರ್ಯಗಳು, ವ್ಯವಸಾಯಾಭಿವೃದ್ಧಿ ಕಾರ್ಯಗಳು, ಕ್ಷಾಮ ನಿವಾರಣಾ ಕಾರ್ಯಗಳು ಮುಂತಾದುವುಗಳನ್ನೆಲ್ಲಾ ಮಾಡುವುದು ಇದಕ್ಕಾಗಿಯೇ!

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಆರ್ಥಿಕ ಪರಿಸ್ಥಿತಿಯ ದೆಸೆಯಿಂದ ಭಿಕ್ಷುಕರು ಹೆಚ್ಚುತ್ತಾರಲ್ಲವೆ?

The Hon'ble Sri K. T. BHASHYAM.—It is a matter of opinion. I agree with the Hon'ble Member.

Sri M. GOVINDA REDDY (Chitaldrug District-General).—What is the percapita expenditure in the Colony?

The Hon'ble Sri K. T. BHASHYAM.—It is about Rs. 17 per month per head.

Sri M. GOVINDA REDDY.—What is the condition of discharge from the

(SRI M. GOVINDA REDDY.)

Colony? Are any beggars admitted into the colony discharged at any time?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವರು ಬಿಟ್ಟು ಹೋಗುತ್ತಾರೆ. ಇನ್ನು ಮೇಲೆ ತಾವು ಭಿಕ್ಷಾಟನೆ ಮಾಡುವುದಿಲ್ಲವೆಂದು ಹೇಳಿ ಹೋಗುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ಅವರ ನೆಂಟರು ಬಂದು ಇನ್ನು ಮೇಲೆ ಅವರನ್ನು ಭಿಕ್ಷೆಗೆ ಬಿಡುವುದಿಲ್ಲವೆಂದು ಹೇಳಿ ಕರೆದುಕೊಂಡು ಹೋಗುತ್ತಾರೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕಾಲೊನಿಯಲ್ಲಿದ್ದ ಭಿಕ್ಷುಕರು ಕೂಡ ತಪ್ಪಿಸಿಕೊಂಡು ಹೋಗಿರುವ ಸಂದರ್ಭಗಳಿವೆಯೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇವೆ.

Sri M. GOVINDA REDDY.—Is the colony maintaining history sheets of these beggars?

The Hon'ble Sri K. T. BHASHYAM.—Yes, we have maintained.

Sri M. GOVINDA REDDY.—Have any been discharged? Are they kept under observation to see whether they lapse into beggary after their discharge?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾವು ಇನ್ನೂ ಅಷ್ಟು ತೀವ್ರವಾದ ಕೆಲಸಕಾರ್ಯಕ್ಕೆ ಹೋಗಿಲ್ಲ. ಈಗ ಒಬ್ಬನು ತಾನು ತಿರುವಣ್ಣಾಮಲೆಗೆ ಹೊರಟು ಹೋಗುತ್ತೇನೆಂದು ಹೇಳಿ ಹೋದರೆ, ನಾವು ಅಲ್ಲಿಯ ಕಲೆಕ್ಟರಿಗೆ ಬರೆದು ಅವನನ್ನು watch ಮಾಡಿ ಎಂದ ತಿಳಿಸುತ್ತಿಲ್ಲ.

Sri M. GOVINDA REDDY.—In order to see that this experiment is successful, is it not desirable that beggars who are discharged, should be kept under observation?

The Hon'ble Sri K. T. BHASHYAM.—Probably it is desirable. But it is beyond our means at present.

Labour Welfare Officers and Labour Investigators.

*Q.—70. **Sri T. HANUMIAH** (Chitaldrug District—Depressed Class)—

Will the Government be pleased to state :—

(*a*) the number of Labour Welfare Officers and Labour Investigators prior to November 1947 with their names, qualifications, caste and pay with grade ;

(*b*) the number of gents and ladies appointed after November 1947 with their names, qualifications, caste and pay with grade ;

(*c*) how many of these are appointed as per rules of the Public Service Commissioner ; the vacancy numbers with dates of advertisement in the *Mysore Gazette* may be furnished against each ?

A.—**The Hon'ble Sri K. T. BHASHYAM** (Minister for Law and Labour).—(*a*) Prior to 1947, there were no posts of Labour Welfare Officers in the Department of Labour.

The following are the Labour Investigators appointed prior to November 1947 :—

Sl. No.	Name	Qualification	Caste	Pay	Grade
	Sriyuths—			Rs.	Rs.
1	H. K. Chandrasekhara ...	B. Sc.	Lingayat	100	100—5—125
2	A. S. Lakshminarayana ...	M.A.	Brahmin	80	80—5—100
3	C. Subba Rao ...	B.A.	Do	60	60—4—80
4	T. Sadasiviah ...	B.A.	Lingayat	100	Fixed
5	C. N. Nanjappa ...	B.A.	Vokkaliga	100	Do
6	B. S. Rama Rao ...	M.A., LL.B.	Brahmin	100	Do
7	H. M. Mahalinganna ...	B.A. (Hons.)	Vokkaliga	100	Do
8	I. Nagappa ...	B.A.	Lingayat	80	Do
9	M. L. Anantharama Rao ...	B.Sc.	Mahratta	80	Do
10	D. R. Nanjiah ...	B.A.	Adikarnataka	80	Do
11	Janab Abdul Ali ...	M.A., LL.B.	Muslim	100	Do
12	Janab Mujeebulla Sheriff ...	B.A.	Do	100	Go
13	Sri G. Padmanabha ...	LL.B.	Pillay	100	Do
14	Sri M. C. Chandrasekharaiya ...	B.A.	Lingayat	60	Do

NOTE.—Sl. Nos. 2, 6 and 10 are new in service in the Department.